ಇ) ಕೃಷಿ ಉತ್ಪನ್ನಗಳ ಹೆಚ್ಚಳಕ್ಕೆ ಸರ್ಕಾರ ರೈತರಿಗೆ ಶೇ 4ರ ಬಡ್ಡಿ ದರದಲ್ಲಿ ಕೃಷಿ ಸಾ, ಶೇ 75ರ ರಿಯಾಯಿತಿಯಲ್ಲಿ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಬಿತ್ತನೆ ಬೀಜ ಶೇ 50ರ ರಿಯಾಯಿತಿಯಲ್ಲಿ ಯಂತ್ರೋಪಕರಣಗಳ ವಿತರಣೆ, ಭೂ ಫಲವತ್ತತೆಯ ಮಣ್ಣು ಆರೋಗ್ಯ, ಒಪ್ಪಂದದ ಕೃಷಿ, ಜೈವಿಕ ಇಂಧನ ಕೃಷಿ, ಸಾವಯವ ಕೃಷಿ, ರಾಷ್ಟ್ರೀಯ ತೋಟಗಾರಿಕಾ ಮಿಷನ್, ಇತ್ತೀಚಿನ ವರ್ಷಗಳಲ್ಲಿ ಆವಿಷ್ಕಾರಗೊಂಡ ಕೃಷಿ ತಂತ್ರಜ್ಞಾನದ ನೆರವನ್ನು ರೈತರಿಗೆ ಒದಗಿಸಲಾಗುತ್ತಿದೆ ವ್ಯವಸ್ಥಿತವಾದ ಮಾರುಕಟ್ಟೆಗಳ ಮೂಲಕ ಕೃಷಿ ಉತ್ಪನ್ನಗಳಿಗೆ ಉತ್ತಮ ಮೌಲ್ಯ ಒದಗಿಸುವ ಹಾಗೂ ಕಟಾವಿನ ನಂತರದ ಸಂಸ್ಕರಣೆ ವಿಧಾನಗಳಿಗಾಗಿ ಅವಶ್ಯವಿರುವ ಬಂಡವಾಳ ಸಾಲಸೌಲಭ್ಯದ ವ್ಯವಸ್ಥೆ ಮಾಡಲಾಗುತ್ತಿದೆ

ಕೃಷಿ ಉತ್ಪನ್ನ ಹೆಚ್ಚಳಕ್ಕೆ ಬೆಳೆ ವೈವಿಧ್ಯತೆ, ಪಶುಸಂಗೋಪನೆ, ಕೋಳಿ ಸಾಕಾಣಿಕೆಯಂತಹ ಕೃಷಿ ಪೂರಕ ಕ್ಷೇತ್ರಗಳಿಗೂ ಸಹ-ಆದ್ಯತೆ ನೀಡಲಾಗುತ್ತಿದೆ

712 (976) ಶ್ರೀ ಶಿವಶಂಕರ್‌ರೆಡ್ಡಿ ಎನ್ ಹೆಚ್ (ಗೌರಿಬಿದನೂರು) – ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಜರಾಯಿ ಇಲಾಖೆಯಲ್ಲಿ ಈ ಹಿಂದೆ 3–4 ಕಾಯಿದೆಗಳನ್ನು ಕ್ರೋಢೀಕರಣ ಸಮಗ್ರವಾದ ಕಾಯಿದೆ ರೂಪಿಸಿದ್ದು, ಈ ಕಾಯಿದೆ ಈಗಲೂ ಚಾಲ್ತಿಯಲ್ಲಿದೆಯೇ ,

ಆ) ಕಾಯಿದೆಯಲ್ಲಿಯ ಕೆಲವು ನಿಯಮಗಳ ಜಾರಿಯ ಮೇಲೆ ರಾಜ್ಯ ಉಚ್ಚನ್ಯಾಯಾಲಯವು ತಡೆಯಾಜ್ಞೆ ನೀಡಿರುವುದು ನಿಜವೇ , (ವಿವರ ನೀಡುವುದು) ,

ಇ) ಅಂತಹ ನಿಯಮಗಳ ತಡೆಯಾಜ್ಞೆಯ ಹಿನ್ನೆಲೆಯಲ್ಲಿ ಹಿಂದಿನ ನಿಯಮಗಳು ಜಾರಿಯಲ್ಲಿರುವುದಿಲ್ಲವೇ , (ವಿವರ ನೀಡುವುದು) ?

ಶ್ರೀ ಬಿ ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು)

ಅ) ಕರ್ನಾಟಕದಲ್ಲಿ ಧಾರ್ಮಿಕ ಮತ್ತು ಧರ್ಮದಾಯ ದತ್ತಿ ಸಂಸ್ಥೆಗಳ ಆಡಳಿತ ಮತ್ತು ನಿರ್ವಹಣೆಗೆ 1 11 1956 ರಿಂದ ಜಾರಿಯಲ್ಲಿದ್ದ ಕಾಯಿದೆಗಳನ್ನು ನಿರಸನಗೊಳಿಸಿ, ದಿ 1 5 03 ರಿಂದ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾಧಾಯ ದತ್ತಿಗಳ ಕಾಯಿದೆ 1997 ನ್ನು ಜಾರಿಗೆ ತರಲಾಯಿತು

ಈ ಕಾಯಿದೆಯನ್ನು ಮಾನ್ಯ ಉಚ್ಚನ್ಯಾಯಾಲಯವು ರಿಟ್ ಅಪೀಲು ಸಂಖ್ಯೆ 3440/2005 ಮತ್ತು ಇತರ ಅಪೀಲುಗಳಲ್ಲಿ ದಿ 8 9 06ರಂದು ನೀಡಿರುವ ತೀರ್ಪಿನಲ್ಲಿ ರದ್ದುಗೊಳಿಸಿರುವುದರಿಂದ ಕಾಯಿದೆ ಈಗ ಜಾರಿಯಲ್ಲಿರುವುದಿಲ್ಲ

ಆ) ಕಾಯಿದೆಯ ಸಿಂಧುತ್ವವನ್ನು ಪ್ರಶ್ನಿಸಿ, ದೇವಾಲಯದ ಆಡಳಿತ ಮಂಡಳಿ ಹಾಗೂ ಇತರೆ ಸಂಘ ಸಂಸ್ಥೆಗಳು ಮಾನ್ಯ ಉಚ್ಚನ್ಯಾಯಾಲಯದಲ್ಲಿ ಹಲವು ರಿಟ್ ಅರ್ಜಿಗಳನ್ನು ಸಲ್ಲಿಸಿದ್ದರು ಸದರಿ ರಿಟ್ ಅರ್ಜಿಗಳಲ್ಲಿ ಮಾನ್ಯ ಉಚ್ಚನ್ಯಾಯಾಲಯವು ಕಾಯ್ದೆಯ 9 ರಿಂದ 16, 17 ರಿಂದ 19, 23, 25, 36 ರಿಂದ 37 ಹಾಗೂ 42 ರ ಉಪಬಂಧಗಳಿಗೆ ಮಾತ್ರ ಮಧ್ಯಂತರ ತಡೆಯಾಜ್ಞೆ ನೀಡಿತ್ತು ತದನಂತರದಲ್ಲಿ ಎಲ್ಲಾ ರಿಟ್ ಅರ್ಜಿಗಳನ್ನು (31937/2003 ಮತ್ತಿತರ) ವಿಚಾರಣೆ ನಡೆಸಿ, ದಿನಾಂಕ 9 9 2005 ರಂದು ನೀಡಿರುವ ತೀರ್ಪಿನ ಎಲ್ಲಾ ರಿಟ್ ಅರ್ಜಿಗಳನ್ನು ವಜಾ ಮಾಡಿ, ಕಾಯ್ದೆಯನ್ನು ಎತ್ತಿ ಹಿಡಿಯಿತು ದಿನಾಂಕ 9 9 2005ರ ಉಚ್ಚನ್ಯಾಯಾಲಯದ ಆದೇಶದ ವಿರುದ್ಧ ಬಾಧಿತರಾದವರು 3440/2005 ಮತ್ತಿತರ ರಿಟ್ ಅಪೀಲುಗಳನ್ನು ಸಲ್ಲಿಸಿದರು ಮಾನ್ಯ ಉಚ್ಚನ್ಯಾಯಾಲಯವು ಎಲ್ಲಾ ರಿಟ್ ಅಪೀಲುಗಳನ್ನು ವಿಚಾರಣೆ ನಡೆಸಿ, ದಿ 8 9 2006 ರಂದು ನೀಡಿರುವ ತೀರ್ಪಿನಲ್ಲಿ ಕಾಯಿದೆ ವ್ಯಾಪ್ತಿಯಿಂದ ಮಠಗಳನ್ನು, ಮಠಗಳಿಗೆ ಸೇರಿದ ದೇವಾಲಯಗಳನ್ನು ಒಂದು ಪಂಗಡಕ್ಕೆ ಸೇರಿದ ಧಾರ್ಮಿಕ ಸಂಸ್ಥೆಗಳನ್ನು ಹೊರತುಪಡಿಸಿರುವುದು ಹಾಗೂ 'ಹಿಂದೂ' ಪದದಲ್ಲಿ ಸಿಖ್, ಬುದ್ಧ ಹಾಗೂ ಜೈನರನ್ನು ಸೇರಿಸದಿರುವುದು

ಅಸಂವಿಧಾನಿಕವೆಂದು ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಕಾಯಿದೆ 1997ನ್ನು ರದ್ದುಪಡಿಸಿತು ಮಾನ್ಯ ಉಚ್ಚನ್ಯಾಯಾಲದ ದಿ 8 9 06ರ ತೀರ್ಪಿನ ವಿರುದ್ಧ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್ ಎಲ್ ಪಿ ಯನ್ನು ದಾಖಲಿಸಿದ್ದು, ವಿಚಾರಣೆಗೆ ಬರಲಿದೆ

ಇ) ಹೌದು

713 (908) ಶ್ರೀ ಸಿದ್ದು ಸಾವದಿ (ಜಮಖಂಡಿ) – ಮಾನ್ಯ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?